RNU AIR DHARWAD

JULY 15, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಉತ್ತರ ಕರ್ನಾಟಕದ, ಧಾರವಾಡ ಜಿಲ್ಲೆ ಅಳ್ನಾವರ,** ಕೊಪ್ಪಳ, ಬಾದಾಮಿ ರೈಲು ನಿಲ್ದಾಣಗಳು ಪ್ರಗತಿಯ ಸಂಕೇತವಾಗಿ ನಿಂತಿವೆ, ಆಧುನಿಕ ಮೂಲಸೌಕರ್ಯಗಳ ಮೂಲಕ ವರ್ಧಿತ ಪ್ರಯಾಣಿಕರ ಸೌಲಭ್ಯಗಳು ಹಾಗೂ ಪ್ರದೇಶದ ಶ್ರೀಮಂತ ಪರಂಪರೆಯೊಂದಿಗೆ ಸಂಯೋಜಿಸುತ್ತಿವೆ. ಅಮೃತ್ ಭಾರತ ಸ್ಟೇ ’ನ್ ಯೋಜನೆಯಡಿ, ಅಳ್ನಾವರ ರೇಲ್ವೆ ನಿಲ್ದಾಣವನ್ನು, 17 ಕೋಟಿ 2 ಲಕ್ಷ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂದು ರೇಲ್ವೆ ಇಲಾಖೆ ತಿಳಿಸಿದೆ. ದಿವ್ಯಾಂಗ ಸ್ನೇಹಿ ಪ್ರಯಾಣಿಕರ ವ್ಯವಸ್ಥೆ, ವಿಶಾಲ ಕಾರ್ಯನಿರ್ವಹಣಾ ಕೊಠಡಿಗಳು, ಬೆಳಕಿನ ವ್ಯವಸ್ಥೆ, ಸುಂದರ ಕಲಾಕೃತಿಗಳು ಹಾಗೂ ವೈ-ಫೈ ಸೌಲಭ್ಯಗಳ ಮೂಲಕ ನಿಲ್ದಾಣವನ್ನು ವಿಶ್ವ ದರ್ಜೆಗೇರಿಸಲಾಗಿದೆ. ಬಾದಾಮಿ ರೇಲ್ವೆ ನಿಲ್ದಾಣವನ್ನು 15 ಕೋಟಿ 1 ಲಕ್ಷ ರೂಪಾಯಿ ವೆಚ್ಚದಲ್ಲಿ ಆಧುನೀಕರಿಸಲಾಗಿದೆ. ಕೊಪ್ಪಳ ರೇಲ್ವೆ ನಿಲ್ದಾಣ 21 ಕೋಟಿ 14 ಲಕ್ಷ ರೂಪಾಯಿ ವೆಚ್ಚದಲ್ಲಿ ಮೇಲ್ದರ್ಜೆಗೇರಿದೆ.

<><><>

**ಪಂಢರಪುರದ, ಆ ಾಢ ವಾರಕರಿ** ಯಾತ್ರೆಗೆ ಅನುಕೂಲವಾಗುವಂತೆ ಸೊಲ್ಲಾಪುರ ರೇಲ್ವೆ ವಿಭಾಗದಿಂದ, ಕಲಬುರಗಿ ಮತ್ತು ಮೀರಜ್ ನಡುವೆ 58 ವಿಶೇ ’ ರೈಲುಗಳ ಘೋ ’ಣೆ ಮಾಡಲಾಗಿದೆ. ಈ ಪೈಕಿ ಕರ್ನಾಟಕದ ಕಲಬುರಗಿ ಮತ್ತು ಮಹಾರಾ ್ಟ್ರದ ಮೀರಜ್ ನಡುವೆ ಪಂಢರಪುರ ಮೂಲಕ 14 ಹೆಚ್ಚುವರಿ ರೈಲುಗಳು ಸಂಚರಿಸಲಿವೆ ಎಂದು ಕೇಂದ್ರ ರೇಲ್ವೆ, ಸೋಲಾಪುರ ವಿಭಾಗದ ಸಾರ್ವಜನಿಕ ಸಂಪರ್ಕ ಇಲಾಖೆ ತಿಳಿಸಿದೆ.

<><><>

**ಬೆಳಗಾವಿ ಲೊಂಡಾ ರೈಲು** ನಿಲ್ದಾಣದ ಯಾರ್ಡ್ ನಲ್ಲಿ ನಡೆಯಲಿರುವ ಉದ್ದೇಶಿತ ಕಾಮಗಾರಿ ಹಿನ್ನೆಲೆ, ಈ ತಿಂಗಳ 24 ರಿಂದ 27 ರ ವರೆಗೆ ಮೀರಜ-ಲೊಂಡಾ ಪ್ರಯಾಣಿಕ ರೈಲು, ಬೆಳಗಾವಿ-ಲೊಂಡಾ ನಡುವೆ ಭಾಗಶಃ ರದ್ದುಗೊಳ್ಳಲಿದೆ. ಈ ರೈಲು ಬೆಳಗಾವಿಯಲ್ಲಿ, ದಿನದ ನಿಗದಿತ ಪ್ರಯಾಣ ಕೊನೆಗೊಳಿಸಲಿದೆ ಎಂದು ರೇಲ್ವೆ ಇಲಾಖೆ ತಿಳಿಸಿದೆ.

<><><>

**ರಾಜ್ಯದ, 5 ಸಾವಿರದ 927 ಗ್ರಾಮ ಪಂಚಾಯಿತಿ,** ವ್ಯಾಪ್ತಿಯ ಎಲ್ಲ ಹಳ್ಳಿಗಳನ್ನು ಆದರ್ಶ ಗ್ರಾಮಗಳಾಗಿ ಪರಿವರ್ತಿಸಬೇಕು, ಪ್ರತಿಯೊಂದು ಗ್ರಾಮೀಣ ಆಸ್ತಿಯನ್ನು ಜಿಯೋ ಟ್ಯಾಗ್ ಮಾಡಬೇಕು ಎಂದು ಪಂಚಾಯಿತಿ ಸಿಬ್ಬಂದಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಖಾತೆ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಪಂಚಾಯಿತಿ ಕಾರ್ಯದರ್ಶಿ ಹಾಗೂ ಲೆಕ್ಕ ಸಹಾಯಕರ ವರ್ಗಾವಣೆ ಕೌನ್ಸೆಲಿಂಗ್ ಗೆ ಚಾಲನೆ ನೀಡಿ ಮಾತನಾಡಿದರು. ಆಗಸ್ಟ್ 15 ರೊಳಗೆ ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ಗ್ರಾಮ ಪಂಚಾಯಿತಿ ಎಂದು ಮರುನಾಮಕರಣ ಮಾಡುವಂತೆ ಸೂಚಿಸಿದರು.

<><><>

**ಈಶ್ವರ ಖಂಡ್ರೆ ಧ್ವನಿ– 36 ಸೆಕೆಂದುಗಳು**

<><><>

**ಕಲಬುರಗಿ ಜಿಲ್ಲೆಯಲ್ಲಿ, ಮತದಾರರ** ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಪ್ರಗತಿಯಲ್ಲಿದೆ. ಶೇಕಡ 98 ದಶಾಂಶ 6,4 ಗಣತಿ ನಮೂನೆ ವಿತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಇಕ್ರಮ್ ಷರೀಪ್ ತಿಳಿಸಿದ್ದಾರೆ. ಒಟ್ಟು 7 ಲಕ್ಷ, 12 ಸಾವಿರದ 758 ಮತದಾರರ ಗಣತಿ ನಮೂನೆ ಡಿಜಿಟಲೀಕರಣಗೊಳಿಸಲಾಗಿದ್ದು, ಶೇಕಡ 30 ದಶಾಂಶ 0, 5 ರಷ್ಟು ಗುರಿ ಸಾಧಿಸಲಾಗಿದೆ ಎಂದಿದ್ದಾರೆ.

<><><>

**ಕೋಲಾರ ಜಿಲ್ಲೆಯ** ಒಟ್ಟು 12 ಲಕ್ಷದ 95 ಸಾವಿರದ 265 ಮತದಾರರಿಗೆ ಶೇಕಡ 100 ರ ಷ್ಟು ಎನ್ಯುಮರೇಶನ್ ನಮೂನೆಗಳ ವಿತರಣಾ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ತಿಳಿಸಿದ್ದಾರೆ.

<><><>

**ಇಂದು ವಿಶ್ವ ಯುವ** ಕೌಶಲಗಳ ದಿನ. 'ಹಂಚಿಕೆಯ ಭವಿಷ್ಯಕ್ಕಾಗಿ ಕೌಶಲ್ಯಗಳು' ಎಂಬ ಧ್ಯೇಯದೊಂದಿಗೆ ಈ ದಿನವನ್ನು ಆಚರಿಸಲಾಗುತ್ತಿದೆ. ವಿಶ್ವಸಂಸ್ಥೆ ಗೊತ್ತುಪಡಿಸಿದ, ಈ ದಿನದಂದು, ಯುವ ಸಮೂಹದ ಉದ್ಯೋಗಾವಕಾಶಗಳಿಗಾಗಿ, ತಾಂತ್ರಿಕ ಹಾಗೂ ವೃತ್ತಿಪರ ಕೌಶಲಗಳ ಬೋಧನೆಯನ್ನು ಉತ್ತೇಜಿಸಲಾಗುತ್ತದೆ.

<><><>

**ಯುವ ಸಮುದಾಯವನ್ನು** ಕೌಶಲ್ಯಯುತಗೊಳಿಸುವ ಮೂಲಕ, ಆತ್ಮ ನಿರ್ಭರ ಭಾರತ ನಿರ್ಮಿಸೋಣ ಎಂದು ಕೇಂದ್ರ ಕಿರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಮ್ಮ ಎಕ್ಸ್ ಖಾತೆ ಕರೆ ನೀಡಿದ್ದಾರೆ.

<><><>

**ಬೆಂಗಳೂರಿನಲ್ಲಿ, ಫ್ಲ್ಯಾಟ್ ಮಾಲಿಕರ** ಕಾನೂನುಬದ್ಧ, ಮಾನವೀಯ, ನಾಗರಿಕ ಹಕ್ಕುಗಳ ರಕ್ಷಣೆಗಾಗಿ ರಾಜ್ಯ ಸರ್ಕಾರ ಕಾಯ್ದೆ ತರಲು ಮುಂದಾಗಿದೆ. ಈ ಕುರಿತು, ಇಂದು, ಫ್ಲ್ಯಾಟ್ ಮಾಲಿಕರ ಸಂಘಗಳೊಂದಿಗೆ ಸಮಗ್ರವಾಗಿ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಮ್ಮ ಎಕ್ಸ್ ಖಾತೆ ಮೂಲಕ ತಿಳಿಸಿದ್ದಾರೆ.

<><><>

**ಕಾವೇರಿ ಜಲ ನಿಯಂತ್ರಣ ಸಮಿತಿ** –ಸಿ.ಡಬ್ಲ್ಯು.ಆರ್.ಸಿ ಸಭೆ ಇಂದು ಹೊಸದಿಲ್ಲಿಯಲ್ಲಿ ಆಯೋಜಿತವಾಗಿದೆ. ಸಭೆಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೇರಿ ಅಧಿಕಾರಿಗಳು ಭಾಗಿಯಾಗಲಿದ್ದಾರೆ. ಸಮಿತಿ ನಾಲ್ಕು ರಾಜ್ಯಗಳ ಅಭಿಪ್ರಾಯ ಆಲಿಸಿ, ನೀರು ಹರಿಸುವ ಕುರಿತು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ–ಸಿ.ಡಬ್ಲ್ಯು.ಎಂ.ಎ ಗೆ ಶಿಫಾರಸು ಮಾಡಲಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>